ನಡೆದು ಬರುತ್ತಿರುವ ಚಿತ್ರವೊಂದಿದೆ: ಅದು ಎಸ್.ಆರ್. ಸ್ವಾಮಿಯವರು ರಚಿಸಿದ್ದ ಗಾಂಧಿಯ ಕೃತಿಯನ್ನು ನೆನಪಿಸುವ, ಬೇರೊಬ್ಬ ಕಲಾವಿದರು ರಚಿಸಿರುವ ಗಾಂಧಿ. ವಿಶೇಷವೆಂದರೆ ಇಲ್ಲಿನ ಚಿತ್ರಿತ ಗಾಂಧಿಯ ಪಾದದ ಬಲ ಭಾಗದಲ್ಲಿ ಕಲಾವಿದರ ಸಹಿ ಇದೆ. ಮೇಲೆ ಸ್ವತಃ ಗಾಂಧೀಜಿಯ ಸಹಿ ಸಹ ಇದೆ. ಅಂದರೆ ಗಾಂಧೀಜಿಯ ಸಹಿಯನ್ನು ಸಹ ಇಲ್ಲಿ ಚಿತ್ರಿಸಲಾಗಿದೆ! ಕನ್ನಡಕ, ಟೋಪಿ, ಮೂರು ಕೋತಿಗಳು, ಹತ್ತು ಹಲವು ಹೇಳಿಕೆಗಳು, ಜೊತೆಗೆ ಅವರ ಸಹಿಯೂ ಸಹ ಚಿತ್ರಣಕ್ಕೆ ಯೋಗ್ಯವಾದ ವಿಷಯಗಳಾಗಿವೆ.

ಶಾಂತಿನಿಕೇತನದಲ್ಲಿ ರಾಮ್ ಕಿಂಕರ್ ಬೈಜ್ ಅವರ ಗಾಂಧಿಯ ಶಿಲ್ಪವೊಂದಿದೆ. ಅಸ್ಸಾಂ ಸರ್ಕಾರವು ಆದೇಶಿಸಿ ನಿರಾಕರಿಸಿದ ನಂತರ ಪ್ರತಿಷ್ಠಾಪಿಸಲಾದ ಕೃತಿ ಇದು. ಇಲ್ಲಿ ಗಾಂಧಿಯು ಶಿವನ ಅವತಾರದಂತೆ, ಅಪಸ್ಮಾರ ತಲೆಯನ್ನು ತುಳಿದು ನಡೆದು ಹೋಗುತ್ತಿದ್ದಾರೆ: ಆ ಬುರುಡೆಗೆ ಯಾವ ಅರ್ಥವನ್ನು ಬೇಕಾದರೂ, ಕಾಲಕಾಲಕ್ಕೆ ರೂಪಾಂತರ ಹೊಂದುವಂತೆ ಆರೋಪಿಸಬಹುದು. ಮೂರ್ನಾಲ್ಕು ಅಡಿಯಷ್ಟೇ ಕಡಿಮೆ ಎತ್ತರದಲ್ಲಿ ನಿಂತಿದ್ದರೂ ಸಹ, ನಾವು ಅದರ ಸಮೀಪ ನಿಂತಲ್ಲಿ, ಬೃಹತ್ತಾಗಿ ಗಾಂಧಿ ನೆಲವನ್ನು ಸ್ಪರ್ಶಿಸದೆ ನಡೆದು ಹೋಗುವಂತೆ, ಎಲ್ಲಿಯೂ ನಿಲ್ಲದಂತೆ, ಈಗಲೋ ಆಗಲೋ ಅವರ ಪಾದದ ಬಳಿಯ ಬುರುಡೆ ಸೀಳುವ ಶಬ್ದದ ನಿರೀಕ್ಷೆ ಹುಟ್ಟಿಸಿ ಹಾಗೆಯೇ ಶಿಥಲೀಕರಣಗೊಳ್ಳುತ್ತದೆ.



ಗಾಂಧಿಯನ್ನು ಪಾಪ್‌ಗೊಳಿಸುವ ಯತ್ನದ ಭಿತ್ತಿಚಿತ್ರ.

ಪ್ರತಿ ದಶಕದಲ್ಲೂ ನಿರಂತರವಾಗಿ 'ಗಾಂಧೀ ಚಿತ್ರ' ಹೊಸ ರೂಪವನ್ನಷ್ಟೇ ಅಲ್ಲ, ಅರ್ಥವನ್ನು ಉದ್ದೀಪಿಸುತ್ತದೆ. ಆದ್ದರಿಂದ ಅದು ಒಂದು ಖಾದಿಯ ನೇಯ್ಗೆಯ ಹೊಲಿಗೆ ಇದ್ದಂತೆ. ಅದರ ತೀವ್ರತೆಯನ್ನಾಗಲಿ, ಸಾಂದ್ರತೆಯನ್ನಾಗಲಿ ಮೊಟಕುಗೊಳಿಸುವ ಸಲುವಾಗಿಯೇ ಆ ಹೊಲಿಗೆಯನ್ನು ಬಳಸಿ ಆಳೆತ್ತರದ, ಊರಗಲದ, ನಶಿಸದ, ತುಕ್ಕು ಹಿಡಿಯದ ಬೊಂಬೆಗಳನ್ನು ಮಾಡಲು ಯತ್ನಿಸಿದರೆ, ಅದು ಆ ಹೊಲಿಗೆಯನ್ನು ಕತ್ತರಿಸಿ ಹಾಕಬಹುದು, ಗೋಜಲಾಗಿಸಬಹುದು, ಗುಂಜಾಡಬಹುದು: ತೊಡರು ವಸ್ತ್ರಕ್ಕೇ ಹೊರತು ಹೊಲಿಗೆಗಲ್ಲವಲ್ಲ! ಆದ್ದರಿಂದ ಕಲಾವಿದರು ರಚಿಸುತ್ತ ಬಂದಿರುವ ಗಾಂಧಿ ಚಿತ್ರವು ಸ್ವತಃ ಗಾಂಧಿಯವರ ಕೈಬರಹವಿದ್ದಂತೆ: ಓದುವುದು ಸುಲಭವಲ್ಲ, ಆದ್ದರಿಂದಲೇ ಅದರ ಸಾರ್ವಕಾಲಿಕ ಸತ್ವ ಸುಲಭಕ್ಕೆ ದಕ್ಕುವುದೂ ಇಲ್ಲ. ಕೇವಲ ಅವರ ಬರವಣಿಗೆಗಳನ್ನು ಆಧರಿಸಿ ಗಾಂಧಿಯ ಅಧ್ಯಯನ ಮಾಡುವವರು, ಅದಕ್ಕೆ ಕೇಂದ್ರ ಸ್ಥಾಪಿಸುವವರು ಇಂತಹ ಚಿತ್ರದ ಬಗ್ಗೆ ಚಿತ್ತ ಹರಿಸಲು ಇದು ಸಕಾಲವೂ ಹೌದಾಗಿದೆ.

**ಎಚ್.ಎ. ಅನಿಲ್ ಕುಮಾರ್**

ಕಲಾವಿದರೂ, ಬೆಂಗಳೂರಿನ 'ಸೃಷ್ಟಿ' ಕಲಾಶಾಲೆಯಲ್ಲಿ ಚಿತ್ರಕಲಾ ಬೋಧಕರೂ ಆಗಿರುವ ಎಚ್.ಎ. ಅನಿಲ್‌ಕುಮಾರ್ ಕನ್ನಡ ಸಾಹಿತ್ಯ ಮತ್ತು ಚಿತ್ರಕಲೆಯ ನಡುವಣ ಕೊಂಡಿಯಂತೆ ಕಾರ್ಯನಿರ್ವಹಿಸುತ್ತಿದ್ದಾರೆ. ಮಾಧ್ಯಮ ಮತ್ತು ಭಾಷೆ ಅವರ ಆಸಕ್ತಿಯ ಪ್ರಮುಖ ಸೆಲೆಗಳು. ಸಾಹಿತ್ಯ, ಸಂಸ್ಕೃತಿ, ಚಿತ್ರಕಲೆ ಹಾಗೂ ಅಲೆದಾಟದ ಅನುಭವಗಳನ್ನು ಒಳಗೊಂಡ ಅನಿಲ್ ಅವರ ಬರಹಗಳು ತಮ್ಮ ವಿಶಿಷ್ಟ ಒಳನೋಟಗಳಿಂದಾಗಿ ಸಹೃದಯರ ಗಮನಸೆಳೆದಿವೆ.